ಶ್ರೀ ಎನ್. ನಂಜೇಗೌಡ.—ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ 50,300 ರೂಪಾಯಿಗಳನ್ನು 169 ಮನೆಗಳಿಗೆ ಒದಗಿಸಿದ್ದೀರಿ. ತಾವು ಕೊಟ್ಟಿರುವ ಪಟ್ಟಿ ಪ್ರಕಾರ 10,298 ರೂಪಾಯಿ 20 ನಯಾಪೈಸೆ ಬಾಕಿ ಇದೆ. ಇನ್ನೂ 79ಮನೆಗಳು ಬಾಕಿ ಇವೆ ಎಂದು ಹೇಳುತ್ತೀರಿ ಕಾರಣವೇನು?

† ಶ್ರಿಮತಿ ಯಶೋದರ ದಾನಪ್ಪ.—ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ 50 ಸಾವಿರ ರೂಪಾಯಿ ಕೊಟ್ಟಾಗ—ಆ 169 ಮನೆಗಳಿಗೆ ಕೊಡುವಾಗ ಕೆಲವರಿಗೆ ಅಲ್ಪಸ್ವಲ್ಪ ಹಣ ಕೊಟ್ಟಿರುವುದರಿಂದ ಅದು ಅರ್ಧ ಹಾಗೆಯೇ ಉಳಿದಿದೆ, 10 ಸಾವಿರ ರೂಪಾಯಿಗಳನ್ನೂ ಕೊಟ್ಟರೆ ಆ 79ಮನೆಗಳೂ ಪೂರ್ತಿಯಾಗುತ್ತವೆ.

ಶ್ರೀ ಎನ್. ನಂಜೇಗೌಡ.—ಆ ಬ್ಲಾಕಿಗೆ 50,300 ರೂಪಾಯಿಗಳನ್ನೂ ಕೊಟ್ಟಿದ್ದೀರಿ ಅಲ್ಲವೇ?

ಶ್ರೀಮತಿ ಯಶೋದರ ದಾನಪ್ಪ.—ಅದು ಏನಾಯಿತು ಎಂದರೆ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ನುಮಾರು 138 ಲಕ್ಷ ರೂಪಾಯಿ ಕೊಟ್ಟಿತ್ತು. 138 ಲಕ್ಷ ರೂಪಾಯಿಗಳವರೆಗೂ ಖರ್ಚಾದರೂ ಕೂಡ 18 ಲಕ್ಷ ರೂಪಾಯಿಗಳಷ್ಟು ಅರ್ಧಂಬರ್ಧ ಆದ ಮನೆಗಳು ಉಳಿದವು. ಆ 18 ಲಕ್ಷ ರೂಪಾಯಿಗಳನ್ನು ಕೊಟ್ಟಾಗ ಆ ಅರ್ಧಂಬರ್ಧ ಮನೆಗಳು ಪೂರ್ತಿಯಾಗುತ್ತವೆ. ಆದರೂ ಕೂಡ ಕೊಡುವಷ್ಟು ಜನಗಳಿಗೆ ಕೊಡದೆ, ಅರ್ಧಂಬರ್ಧ ಮನೆಗಳಿಗೆ ಪೂರ್ತಿಕೊಡದೇ ಮತ್ತೆ ಕೆಲವರಿಗೆ ಹೆಚ್ಚಾಗಿ ಕೊಟ್ಟಿದ್ದರಿಂದ ಈ ರೀತಿ ಅರ್ಧಂಬರ್ಧ ಉಳಿಯಿತು. ಇದನ್ನು ಪೂರ್ಣ ಮಾಡಬೇಕಾದರೆ 13 ಲಕ್ಷ ಚಿಲ್ಲರೆ ರೂಪಾಯಿ ಬೇಕಾಗಿದೆ.

ಶ್ರೀ ಎನ್. ನಂಜೇಗೌಡ.—300 ರೂಪಾಯಿಗಳ ಪ್ರಕಾರ ಕೊಟ್ಟರೆ 50,300 ರೂಪಾಯಿಗಳಿಗೆ ಅಷ್ಟೂ ಕೂಡ ಪೂರ್ತಿ ಯಾಗಬೇಕು. ಈಗ ತಾವು ಕೊಟ್ಟಿರುವ ಪಟ್ಟಿಪ್ರಕಾರ 10,200 ರೂಪಾಯಿ ಬಾಕಿ ಇದೆ. ಇದು ಹೇಗೆ ಬಂತು?

ಶ್ರೀಮತಿ ಯಶೋದರ ದಾನಪ್ಪ.—ಅರ್ಧಂಬರ್ಧ ಮನೆ ಉಳಿದುಕೊಂಡಿರುವುದರಿಂದ 10 ಸಾವಿರ ರೂಪಾಯಿ ಕೊಡಬೇಕಾಗಿದೆ.

ಶ್ರೀ ಎನ್. ನಂಜೇಗೌಡ.—50,300 ರೂಪಾಯಿಗಳನ್ನು ಕೊಟ್ಟರೆ 169 ಮನೆಗಳೂ ಪೂರ್ತಿ ಯಾಗಬೇಕಲ್ಲವೇ?

ಶ್ರೀಮತಿ ಯಶೋದರ ದಾನಪ್ಪ.—ಹಿಂದೆ ಸಬ್ಸಿಡಿ ಇದ್ದದ್ದು 400 ರೂಪಾಯಿನಂತೆ. ಆ ಪ್ರಕಾರ ಕೊಟ್ಟಿದ್ದಾರೆ. ಅದಕ್ಕೇ ಹಾಗೆ ಆಗಿದೆ.

Sri RAMAKRISHNA HEGDE.—May I suggest Sir, that question Nos. 725 and 726, both may be taken together.

Sri SPEAKER.—Yes both may be taken up together.

Granting of contribution from the Social Welfare Department for construction of Drinking Water Wells for Scheduled Class People of Ranibennur taluk.

*Q.—725 **Smt. YELLAWWA SAMBRANI** (Ranibennur).—

Will the Government be pleased to state.—

(*a*) the reasons as to why the Social Welfare Department have not yet granted their share of the estimated cost of construction of drinking water wells for the Scheduled Castes people of.—

(i) Aremallapura,
(ii) Joyasaraharahalli,

† Indicates that the remarks or speeches have not been revised by the member concerned

(iii) Billalli and
(iv) Matanura villages

of Ranibennur Taluk even though the work has been commenced and the Taluk Board has been urging for the last one year;

(*b*) whether they intend to sanction the grant at least in 1963-64?

A.—Sri RAMAKRISHNA HEGDE (Minister for Co-operation and Development).—

(*a*) As these works have been taken under Local Development Works Programme, there is no question of granting a contribution from the Social Welfare Department.

(*b*) Does not arise.

Providing of their Share by the Social Welfare Department for Construction of Drinking Water Wells for Denotified Tribes in Several Villages of Ranibennur Taluk.

**Q*.—726 Smt. YELLAWWA SAMBRANI (Ranibennur).—

Will the Government be pleased to state.—

(*a*) the reasons as to why the Social Welfare Department have not yet provided their share of 95 per cent of the cost of construction of drinking water wells for the denotified tribes of (i) Gudugura Thanda, (ii) Kakola Thanda villages of Ranibennur Taluk even though the work has been commenced one year back;

(*b*) whether it has come to the notice of the Government that the work has been commenced;

(*c*) whether the Social Welfare Department intend to provide their share of the cost at least in 1963-64?

A.—Sri RAMAKRISHNA HEGDE (Minister for Co-operation and Development).—

(*a*) As these works have been taken up under the L.D. Works Programme, the Social Welfare Department is not required to pay any share towards these works.

(*b*) Yes.

(*c*) Does not arise in view of the reply to clause (*a*) above.

ಶ್ರೀಮತಿ ವಿ. ವಿ. ಮಿರ್ಜಾಂಕರ್.—ಲೋಕಲ್ ಡೆವಲಪ್‌ಮೆಂಟ್ ವರ್ಕ್ಸ್‌ನಲ್ಲಿ ಕೆಲಸ ತೆಗೆದು ಕೊಂಡಿದ್ದೀವೆ ಎಂದು ಹೇಳಿದ್ದೀರಿ, ಎಷ್ಟು ಕೆಲಸ ಆಗಿದೆ ?

ಶ್ರೀ ರಾಮಕೃಷ್ಣ ಹೆಗಡೆ.—ಕಾಕೋಲ ತಂಡದ ಕೆಲಸ 55 ಪರ್ಸೆಂಟ್ ಮುಗಿದಿದೆ. ಮತ್ತೊಂದು ಗುಡುಗುರ ತಂಡದ ಕೆಲಸ 50 ಪರ್ಸೆಂಟ್ ಮುಗಿದಿದೆ.

ಶ್ರೀಮತಿ ವಿ. ವಿ. ಮಿರ್ಜಾಂಕರ್.—ಬಾಕಿ ಉಳಿದಿರತಕ್ಕ ಕೆಲಸ ಯಾವಾಗ ಶುರು ಮಾಡುತ್ತೀರಿ ? ಇಷ್ಟು ನಿಧಾನವಾಗಲಕ್ಕೆ ಕಾರಣವೇನು ?

ಶ್ರೀ ರಾಮಕೃಷ್ಣ ಹೆಗಡೆ.—ಇದನ್ನು ಶುರು ಮಾಡಿದ್ದೇ ಕಳೆದ ವರ್ಷ 28-2-62ರಲ್ಲಿ.